# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಈ ಕಾಲೇಜಿನ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ವೇತನಾನುದಾನಕ್ಕೆ ಅನುಮೋದಿಸುವ ಬಗ್ಗೆ.

ಓದಲಾಗಿದೆ:

1. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದ ಪತ್ರಗಳು: ಸಂಖ್ಯೆ: ಶಿಶ3 ಇತರೆ ಅನುದಾನ 02/2004-05, ದಿನಾಂಕ 1) 31-12-2010 ಮತ್ತು 2) ದಿನಾಂಕ 04-11-2011
2. ಸರ್ಕಾರಿ ಆದೇಶ ಸಂಖ್ಯೆ:ಇಡಿ 295 ಯುಎನ್‌ಇ 2010, ದಿನಾಂಕ 13-04-2011
3. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ:ಶಿಶ3.ಇತರೆ ಅನುದಾನ08/2009-10, ದಿನಾಂಕ 27-04-2011.
4. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ:ಶಿಶ3.ಅನುದಾನ08/2008-09, ದಿನಾಂಕ 21-01-2012.
5. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 06 ವಿವಿಧ 2001,ದಿನಾಂಕ12-10-2001.

## ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾಗಿರುವ ಪತ್ರಗಳನ್ವಯ ಉಲ್ಲೇಖ(2)ರಲ್ಲಿನ ಸರ್ಕಾರಿ ಆದೇಶದಲ್ಲಿ, ಕೆಲವು ಷರತ್ತುಗಳನ್ನು ವಿಧಿಸಿ, ಒಟ್ಟು ಆರು ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಲು ನಿರ್ಣಯಿಸಲಾಗಿದೆ. ಸದರಿ ಆದೇಶದಲ್ಲಿರುವ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ, ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಈ ಕಾಲೇಜು ಕ್ರಮ ಸಂ. 04ರಲ್ಲಿ ಇರುತ್ತದೆ.

ಮೇಲೆ ಓದಲಾಗಿರುವ (3) ಮತ್ತು (4)ರ ಪತ್ರಗಳಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರು, ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಈ ಕಾಲೇಜು 1986-87ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭವಾಗಿದ್ದು, ಸತತವಾಗಿ ನಡೆಯುತ್ತಿರುವುದಾಗಿಯೂ ಹಾಗೂ ಈ ಸಂಸ್ಥೆಯ ಮೇಲೆ ಯಾವುದೇ ನ್ಯಾಯಾಲಯ ಪ್ರಕರಣಗಳು ಇರುವುದಿಲ್ಲವೆಂದೂ ಹಾಗೂ ಸದರಿ ಕಾಲೇಜಿಗೆ NCTEಯ ನಿಯಮದಂತೆ ಸ್ವಂತ ಕಟ್ಟಡವಿದ್ದು, ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಹೊಂದಿರುವುದಾಗಿಯೂ ತಿಳಿಸಿದ್ದಾರೆ. ಹಾಗೆಯೇ ಸದರಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು NCTE/ ರಾಜ್ಯ ನೇಮಕಾತಿ ನಿಯಮಗಳನ್ವಯ ಶೈಕ್ಷಣಿಕ ವಿದ್ಯಾರ್ಹತೆ ಇತ್ಯಾದಿಗಳ ಬಗ್ಗೆ ಮಾಹಿತಿ/ ಅಂಕಿ ಅಂಶಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ನೀಡಿರುತ್ತಾರೆ. ಇದರ ಜೊತೆಗೆ, ಪ್ರಾಂಶುಪಾಲರನ್ನೊಳಗೊಂಡ ತ್ರಿಸದಸ್ಯರ ಸಮಿತಿ, ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ ಇವರು ಸಲ್ಲಿಸಿರುವ ತಪಾಸಣಾ ವರದಿ ಹಾಗೂ ಸಿಬ್ಬಂದಿಗಳ ವಿದ್ಯಾರ್ಹತೆಗಳ ಬಗ್ಗೆ ದಾಖಲೆಗಳನ್ನೂ ತಮ್ಮ ಪ್ರಸ್ತಾವನೆಯ ಜೊತೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದು, ಅವುಗಳನ್ನು ಸಹ ಸಂವೀಕ್ಷಿಸಲಾಗಿದೆ.

ಮೇಲೆ (5)ರಲ್ಲಿ ಓದಲಾಗಿರುವ ಸರ್ಕಾರಿ ಅಧಿಸೂಚನೆಯಲ್ಲಿ 100 ವಿದ್ಯಾರ್ಥಿಗಳ ಸಂಖ್ಯಾಬಲವಿರುವ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ, ಬೋಧಕ ಮತ್ತು ಬೋಧಕೇತರ ಮಾದರಿಯನ್ನು (ಸ್ಟಾಫ್ ಪ್ಯಾಟರ್ನ್) ನಿರ್ಧರಿಸಿದ್ದು, ಆ ಪ್ರಕಾರ ಒಬ್ಬ ಪ್ರಾಂಶುಪಾಲರು, ಉಪನ್ಯಾಸಕರುಗಳು ಸೇರಿದಂತೆ ಒಟ್ಟು 10 ಬೋಧಕ ಹುದ್ದೆಗಳು ಮತ್ತು 17 ವಿವಿಧ ಬೋಧಕೇತರ ಹುದ್ದೆಗಳು, ಈ ರೀತಿ ಒಟ್ಟು 27 ಹುದ್ದೆಗಳ ಮಂಜೂರಾತಿಗೆ ಅವಕಾಶವಿರುತ್ತದೆ.

ಈ ಅಂಶಗಳ ಹಿನ್ನೆಲೆಯಲ್ಲಿ ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಇಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇಡಿ 41 ಯುಎನ್‌ಇ 2011, ಬೆಂಗಳೂರು, ದಿನಾಂಕ: 04-06-2012

ಈ ಅಂಶಗಳ ಹಿನ್ನೆಲೆಯಲ್ಲಿ ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಈ ಶಿಕ್ಷಣ ಮಹಾವಿದ್ಯಾಲಯದ ಈ ಕೆಳಕಂಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ಕೆಳಗೆ ಹೇಳಿರುವ ಷರತ್ತುಗೊಳಪಟ್ಟು ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿದೆ.

ಬೋಧಕ ಸಿಬ್ಬಂದಿ:

| ಕ್ರಮ ಸಂಖ್ಯೆ | ಬೋಧಕರ ಹೆಸರು ಶ್ರೀಮತಿ/ಶ್ರೀ | ಜನ್ಮ ದಿನಾಂಕ | ನೇಮಕಾತಿ ದಿನಾಂಕ |
|---|---|---|---|
| 1 | ಡಾ: ಎಸ್.ಡಿ. ಶೇಬು, ಪ್ರಾಂಶುಪಾಲರು (ದಿನಾಂಕ 05-01-2005ರಂದು ಪ್ರಾಂಶುಪಾಲರ ಹುದ್ದೆಗೆ ಬಡ್ತಿ ಹೊಂದಿರುತ್ತಾರೆ) | 20-07-1966 | 01-07-1990 |
| 2 | ಶ್ರೀಮತಿ ವಿಜಯಲಕ್ಷ್ಮಿ ದಂಡಿನ, ಉಪನ್ಯಾಸಕರು | 13-05-1968 | 25-09-1991 |
| 3 | ಡಾ: ಆರ್.ಎಂ. ಕೋಟೂರು, ಉಪನ್ಯಾಸಕರು | 09-04-1967 | 01-08-2008 |
| 4 | ಶ್ರೀಮತಿ ಆಶಾ ಪಾಟೀಲ ಉಪನ್ಯಾಸಕರು | 17-05-1972 | 01-08-2008 |
| 5 | ಶ್ರೀಮತಿ ಜ್ಯೋತಿಶ್ರೀ ಹಿರೇಮಠ, ಉಪನ್ಯಾಸಕರು | 22-07-1976 | 02-08-2008 |
| 6 | ಶ್ರೀ ಪಂಪಾಪತಿ ಹೆಗಡಿ, ಉಪನ್ಯಾಸಕರು | 22-07-1971 | 04-08-2008 |
| 7 | ಶ್ರೀ ಮಂಜುನಾಥ ಭಟ್ಟ, ಉಪನ್ಯಾಸಕರು | 15-01-1978 | 04-08-2008 |
| 8 | ಶ್ರೀ ರಾಜಕುಮಾರ್ ಪಾಟೀಲ, ಉಪನ್ಯಾಸಕರು | 05-03-1983 | 04-08-2008 |
| 9 | ಡಾ: ಹೆಚ್.ವಿ. ಬೆಳಗಲಿ, ಉಪನ್ಯಾಸಕರು | 01-03-1970 | 05-08-2008 |
| 10 | ಶ್ರೀ ದೊಡ್ಡ ಬಸಪ್ಪ ನಾಯ್ಕ, ಉಪನ್ಯಾಸಕರು | 01-06-1976 | 01-01-2009 |

ಬೋಧಕೇತರ ಸಿಬ್ಬಂದಿ:

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ | ಜನ್ಮ ದಿನಾಂಕ | ನೇಮಕಾತಿ ದಿನಾಂಕ |
|---|---|---|---|
| 1 | ಶ್ರೀ ಹೊನಕೇರಪ್ಪ ಕಂ. ದೈಹಿಕ ಶಿಕ್ಷಕರು | 01-07-1975 | 04-08-2008 |
| 2 | ಶ್ರೀ ಎಸ್.ಎಸ್. ಬನಹಾಳ, ಗ್ರಂಥಪಾಲಕರು | 22-07-1977 | 02-01-2006 |
| 3 | ಶ್ರೀಮತಿ ಎಂ.ಡಿ. ಇನಾಮತಿ, ಪ್ರ.ದ.ಸ. (ಇವರು ದಿನಾಂಕ 01-01-1991ರಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ) | 21-06-1959 | 16-12-1986 |
| 4 | ಶ್ರೀಮತಿ ಸುಧಾ ದಂಡಿನ, ಪ್ರ.ದ.ಸ. | 01-07-1974 | 02-01-2006 |
| 5 | ಶ್ರೀ ಮಾರುತಿ ವೆಂಕಟಾಪುರ, ಸಿ.ಸಿ.ಟಿ. | 01-07-1986 | 01-01-2009 |

| | | | |
|---|---|---|---|
| 6 | ಶ್ರೀ ಮಂಜುನಾಥ ಶಿರಗುಪ್ಪಿ, ತಾಂತ್ರಿಕ ಸಹಾಯಕ | 08-01-1987 | 09-02-2009 |
| 7 | ಶ್ರೀಮತಿ ಪ್ರತಿಭಾ ಮಲ್ಲಾರಿ, ಗ್ರಂಥಾಲಯ ಸಹಾಯಕಿ | 01-05-1987 | 01-01-2009 |
| 8 | ಶ್ರೀ ವೆಂಕಟೇಶ ಜನಗಿ, ದ್ವಿ.ದ.ಸ. | 20-07-1978 | 09-02-2009 |
| 9 | ಶ್ರೀ ಎಂ.ಬಿ. ಅತ್ತಿಕೊಳ್ಳ, ಅಟೆಂಡರ್ | 22-07-1964 | 01-06-1992 |
| 10 | ಶ್ರೀ ರಾಚಪ್ಪ ಮನವಳ್ಳಿ, ಅಟೆಂಡರ್ | 16-07-1980 | 01-01-2009 |
| 11 | ಶ್ರೀಮತಿ ಶ್ರೀದೇವಿ ಕಾಮಜ, ಅಟೆಂಡರ್ | 20-03-1986 | 01-01-2009 |
| 12 | ಶ್ರೀ ಗೌಸಲ್ ಅಜೀಂ ಶೇಖ, ಅಟೆಂಡರ್ | 05-06-1988 | 08-06-2006 |
| 13 | ಶ್ರೀ ಚಂದ್ರಪ್ಪ ಮುಸುಂಡಿ, ಸಿಪಾಯಿ | 05-10-1983 | 01-01-2009 |
| 14 | ಶ್ರೀ ಪ್ರಶಾಂತ ನವಲಗುಂದ, ಸಿಪಾಯಿ | 05-05-1991 | 01-06-2009 |
| 15 | ಶ್ರೀ ಕುಮಾರ ದೋಣಿ, ಸಿಪಾಯಿ | 21-04-1986 | 01-08-2008 |
| 16 | ಶ್ರೀ ಮಹೇಶ ಕೋರಿ, ಕಾವಲುಗಾರ | 05-01-1972 | 01-08-2008 |
| 17 | ಶ್ರೀ ಮಹಬೂಬಸಾಬ, ಮುಳಗುಂದ, ಸ್ವಚ್ಛಗಾರ | 01-07-1987 | 01-01-2009 |

ಷರತ್ತುಗಳು:-

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಾತಿನಿಧ್ಯದಲ್ಲಿ ಮೀಸಲಾತಿ ಕೊರತೆಯನ್ನು ಭವಿಷ್ಯತ್ತಿನಲ್ಲಿ ತೆರವಾಗುವ ಎಲ್ಲಾ ಹುದ್ದೆಗಳನ್ನು ಮೀಸಲಾತಿ ಕೊರತೆ ಸರಿದೂಗುವವರೆಗೆ ಸಂಬಂಧಪಟ್ಟ ಮೀಸಲಾತಿ ಅಭ್ಯರ್ಥಿಗಳಿಂದಲೇ ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳತಕ್ಕದ್ದು.

2. ಈ ಕಾಲೇಜಿನ ಬೋಧಕ/ಬೋಧಕೇತರ ಸಿಬ್ಬಂದಿಗಳ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಎಲ್ಲಾ ಅಂಕಪಟ್ಟಿ/ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ದೃಢೀಕರಿಸಿಕೊಂಡ ನಂತರವೇ ವೇತನ ಪಾವತಿಗೆ ಕ್ರಮ ಕೈಗೊಳ್ಳುವುದು.

3. ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳ ಅಡಿಯಲ್ಲಿ ನೇಮಕಾತಿ ಹೊಂದಿದ್ದಲ್ಲಿ, ಅವರು ತಮ್ಮ ಜಾತಿ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ನಂತರವೇ ಅಂತಹ ಸಿಬ್ಬಂದಿಗಳ ವೇತನ ಪಾವತಿಸಲು ಕ್ರಮ ವಹಿಸುವುದು.
4. ಸದರಿ ಕಾಲೇಜಿನ ಫಲಿತಾಂಶ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಇತರೆ ಕಾಲೇಜುಗಳಲ್ಲಿನ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇರತಕ್ಕದ್ದಲ್ಲ, ಈ ಬಗ್ಗೆ ಕಳೆದ 05 ವರ್ಷಗಳ ಫಲಿತಾಂಶವನ್ನು ಆಧರಿಸಿ ವೇತನಾನುದಾನಕ್ಕೆ ಒಳಪಡಿಸಲು ಅರ್ಹತೆ ಪಡೆದಿರುವುದನ್ನು ದೃಢೀಕರಿಸಿಕೊಂಡು ಕ್ರಮವಹಿಸಬೇಕು.
5. ಸದರಿ ಕಾಲೇಜನ್ನು ವೇತನಾನುದಾನಕ್ಕೆ ಒಳಪಡಿಸಲು ತಗಲುವ ವೆಚ್ಚವನ್ನು ಇಲಾಖೆಗೆ ಒದಗಿಸಿದ ಯೋಜನಾ ಅನುದಾನದ ಮಿತಿಯಲ್ಲಿಯೇ ಭರಿಸಲು ಹೊಂದಾಣಿಕೆ ಮಾಡಿಕೊಳ್ಳಬೇಕು.
6. ಈ ಕಾಲೇಜಿನ ಬೋಧಕ ಮತ್ತು ಇತರೆ ಸಿಬ್ಬಂದಿಗಳ ವೇತನವನ್ನು ರಾಜ್ಯ ವೇತನ ಶ್ರೇಣಿಯಲ್ಲಿ ನಿಗದಿಗೊಳಿಸತಕ್ಕದ್ದು.

7. ಹುದ್ದೆ ಅನುಮೋದನೆಗೊಂಡಿರುವ ಸಿಬ್ಬಂದಿಯು ಯಾವುದೇ ಹಂತದಲ್ಲಿ ತಪ್ಪು ಹೇಳಿಕೆ/ ಅಸತ್ಯವಾದ ಮಾಹಿತಿಯನ್ನು ಒದಗಿಸಿದಲ್ಲಿ, ಅಂತಹ ನೇಮಕಾತಿಯನ್ನು ರದ್ದುಪಡಿಸಲಾಗುವುದು.

8. ಸಿಬ್ಬಂದಿಗಳ ವೇತನಾನುದಾನವು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.
9. ಸದರಿ ಕಾಲೇಜಿನಲ್ಲಿ ನೇಮಕಾತಿ ಹೊಂದಿರುವ ಬೋಧಕ ಸಿಬ್ಬಂದಿ ವರ್ಗದ ಪೈಕಿ ಶ್ರೀಮತಿ ವಿಜಯಲಕ್ಷ್ಮಿ, ಉಪನ್ಯಾಸಕರು, ಶ್ರೀ ಮಂಜುನಾಥ್ ಭಟ್ಟ, ಉಪನ್ಯಾಸಕರು, ಶ್ರೀ ಪಂಪಾಪತಿ ಹೆಗಡಿ, ಉಪನ್ಯಾಸಕರು, ಶ್ರೀ ದೊಡ್ಡಬಸಪ್ಪನಾಯಕ ಉಪನ್ಯಾಸಕರು ಇವರುಗಳು ತಾವು ಬೋಧಿಸುತ್ತಿರುವ ಟೀಚಿಂಗ್ ಮೆಥಡ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಮೂರು ವರ್ಷಗಳ ಕಾಲಾವಧಿಯೊಳಗೆ ಪೂರ್ಣಗೊಳಿಸತಕ್ಕದ್ದು.

10. ಬೋಧಕ ಹುದ್ದೆಗಳಲ್ಲಿರುವ ಸಿಬ್ಬಂದಿಗಳಲ್ಲಿ Ph.D ಪದವಿಯನ್ನು ಹೊಂದದೇ ಇರುವವರು NET/SLET ಪರೀಕ್ಷೆಗಳನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮೂರು ವರ್ಷಗಳೊಳಗಾಗಿ ತೇರ್ಗಡೆಯಾಗತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂ. ಆಇ 251 ವೆಚ್ಚ-8/2011, ದಿನಾಂಕ:10-04-2012ರಲ್ಲಿ ಮತ್ತು ಟಿಪ್ಪಣಿ ಸಂ. ಆಇ 1260 ವೆಚ್ಚ 8/2008, ದಿನಾಂಕ:04-03-2009 ಹಾಗೂ ಟಿಪ್ಪಣಿ ಸಂ. ಆಇ 320 ವೆಚ್ಚ 8/2009, ದಿನಾಂಕ:16-09-2009ರಲ್ಲಿ ನೀಡಿರುವ ಅಭಿಪ್ರಾಯ/ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಎಸ್. [illegible])
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಖಜಾನೆ ಇಲಾಖೆ, ಬೆಂಗಳೂರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ,ಬೆಂಗಳೂರು.
4. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಕಾರ್ಯದರ್ಶಿ, ಕನಕದಾಸ ಶಿಕ್ಷಣ ಸಮಿತಿ, ಗದಗ.
6. ಪ್ರಾಂಶುಪಾಲರು, ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನಸೌಧ.
8. ವಿಶೇಷಾಧಿಕಾರಿ ಹಾಗೂ ಸರ್ಕಾರದ ಪದನಿಮಿತ್ತ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ).
9. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಧಾರವಾಡ
10. ಸಂಬಂಧಿಸಿದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ – (ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಇವರ ಮುಖಾಂತರ).
11. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ/ಸರ್ಕಾರದ ಉಪಕಾರ್ಯದರ್ಶಿ (ವಿಶ್ವವಿದ್ಯಾಲಯಗಳು) ಯವರ ಆಪ್ತ ಸಹಾಯಕರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

PRINCIPAL
Vijayanagar College of Education
Vidyanagar, HUBLI-31.

PRINCIPAL
Vijayanagar College of Education
Vidyanagar, HUBLI-31.